ಸೋಮಪ್ಪನವರು ಚರ್ಚೆ ಮಾಡುವುದಕ್ಕೆ ನಾನು ರೆಡಿ ಇದ್ದೇನೆ ಎಂದು ಹೇಳುತ್ತಿರುವುದರಿಂದ ಈ ಸಮಸ್ಯೆಯ ಗಂಭೀರತೆಯನ್ನು ತಾವು ಅರಿತುಕೊಳ್ಳಬಹುದು. ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿಕೆ ಕೊಟ್ಟ ದಿವಸ ಅಥವಾ ಅದರ ಮಾರನೇ ದಿವಸವೇ ಒಬ್ಬ ಅಧಿಕಾರಿ ನನಗೆ ಸಿಕ್ಕಿ ಸೀಜ್ ಮಾಡಿರುವ ದಾಖಲೆಗಳ ಬಗ್ಗೆ ನನಗೆ ಹೇಳಿದ್ದರು. ಪುನಃ ಪುನಃ ಗಂಟು ಹಾಕಿ ಹೇಳತಕ್ಕಂಥಾದ್ದನ್ನು, ಅದಕ್ಕೂ ಇದಕ್ಕೂ ಸಂಬಂಧ ಮಾಡತಕ್ಕಂಥಾದ್ದನ್ನು, ಸದಸ್ಯರ ತೇಜೋವಧೆ ಮಾಡತಕ್ಕದ್ದನ್ನು ಸರ್ಕಾರ ಕೈಬಿಡಬೇಕೆಂದು ಹೇಳುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.— ಲಾರಿ ಸೀಸ್ ಆಗಿದೆ ಎಂದು ಹೇಳಿದ್ದೀರಿ, ಅದು ಎಲ್ಲಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಮಾಣಿಕರಾವ್ ಪಾಟೀಲ್.— ಈ ರಾಜ್ಯದಲ್ಲಿ ಇಲಿಗಳು, ತೋಳಗಳು, ಹುಲಿಗಳು ಇವೆ, ಅವುಗಳಿಂದ ಜನಗಳಿಗೆ ತೊಂದರೆಯಾಗುತ್ತದೆಂದು ತಿಳಿದೆ. ಅರಣ್ಯ ಮಂತ್ರಿಗಳು ತೊಂದರೆ ಕೊಡುವುದಕ್ಕೆ ಪ್ರಾರಂಭ ಮಾಡಿದರೆ ಹೇಗೆ ?

ಶ್ರೀ ಜೆ.ಡಿ. ಸೋಮಪ್ಪ.— ಸ್ವಾಮಿ, ನನಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು.— ನಾವು ನಿಮ್ಮ ಸಹಾಯಕ್ಕೆ ಬರುತ್ತೇವೆಂದರೂ ನಮ್ಮ ಸಹಾಯ ನೀವು ತೆಗೆದುಕೊಳ್ಳುವುದಿಲ್ಲವಲ್ಲ.

ಮಾನ್ಯ ಸದಸ್ಯರು.— ಸ್ವಾಮಿ, ನಾನು 334ರ ಕೆಳಗೆ ಒಂದು ನೋಟೀಸ್ ಕೊಟ್ಟಿದ್ದೆ, ಸರ್ಕಾರದವರು ಅದರ ಬಗ್ಗೆ ಉತ್ತರ ಹೇಳುತ್ತಾರೆಯೇ ?

ಶ್ರೀ ಎ ಲಕ್ಷ್ಮೀ ಸಾಗರ್.— ಸಾಕಷ್ಟು ವಿವರಗಳನ್ನು ತರಿಸಿಕೊಂಡು ಉತ್ತರ ಹೇಳುತ್ತೇನೆಂದು ನಿನ್ನೆ ದಿವಸವೇ ಹೇಳಿದ್ದೇನೆ.

7. ಗಮನ ಸೆಳೆಯುವ ಸೂಚನೆ

ವಿಷಯ : ಬಳ್ಳಾರಿ ನಗರದ ರಾಮನಗರ ಬಡಾವಣೆಯಲ್ಲಿ ಎಂಟು ಗುಡಿಸಲುಗಳು ಬೆಂಕಿ ಆಕಸ್ಮಿಕಕ್ಕೆ ಒಳಗಾಗಿ ಆ ಸಂಸಾರಗಳು ವಸತಿ ರಹಿತರಾಗಿರುವ ವಿಚಾರ

ಶ್ರೀ ಪಂ ರಾಮಪ್ಪ — ಮಾನ್ಯ ಅಧ್ಯಕ್ಷರೇ, ಬಳ್ಳಾರಿಯಲ್ಲಿ ರಾಮನಗರ ಎನ್ನುವ ಪ್ರದೇಶದಲ್ಲಿ ಸುಮಾರು 8 ಗುಡಿಸಲುಗಳು ಸುಟ್ಟು ಹೋಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಬಳ್ಳಾರಿಯಲ್ಲಿ ರಾಮಪ್ಪ ನಗರ ಎಂದು ಇದೆ, ರಾಮನಗರ ಎಂದು ಇಲ್ಲ. ಅದು ಮಾನ್ಯ ಸದಸ್ಯರ ಪೆಸರಿನಲ್ಲಿಯೇ ಇದೆ. ಮೊದಲು ಈ ವಿಚಾರದಲ್ಲಿ ದೂರು ಬರಲಿಲ್ಲ. 7 ಏಕರೆ ಪ್ರದೇಶವುಳ್ಳ ಆ ಜಾಗದ ಮಾಲೀಕರು ತಿಮ್ಮಪ್ಪ ಎಂದು. ಮಾನ್ಯ ರಾಮಪ್ಪನವರ ಆರೋಪ ಏನೆಂದರೆ, ತಿಮ್ಮಪ್ಪನವರು ತಿಂಗಳಿಗೆ ಇಂತಿಷ್ಟು ಬಾಡಿಗೆ ವಸೂಲು ಮಾಡುತ್ತಿದ್ದಾರೆ, ಗುಡಿಸಲುಗಳನ್ನು ಸುಟ್ಟು ಹಾಕುತ್ತಿದ್ದೇವೆಂದು ಪೆದರಿಸುತ್ತಿದ್ದಾರೆಂದು ಹೇಳಿದ್ದಾರೆ. ಆದರ ಬಗ್ಗೆ ಕೂಡ್ಲ ಕ್ರಮ ತೆಗೆದುಕೊಳ್ಳಲಾಗಿದೆ. ಸ್ಥಾನಿಕ ಅಧಿಕಾರಿಗಳು ಒಟ್ಟು 4300 ರೂಪಾಯಿ ಪರಿಹಾರ ಪೇಜಾರು ಮಾಡಿದ್ದಾರೆ. ಬಬ್ಬರಿಗೆ 300 ರಿಂದ 500 ರೂಪಾಯಿಗಳವರೆಗೆ ಪರಿಹಾರವನ್ನು ಕೊಟ್ಟಿದ್ದಾರೆ. ಜೊತೆಗೆ ರಾಮಪ್ಪನವರ ಮನೆಯವರು ಪ್ರತಿಯೊಬ್ಬರಿಗೂ 200 ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಲ್ಲಿರತಕ್ಕವರೆಲ್ಲರೂ ರಾಮಪ್ಪನವರ ಅಭಿಮಾನಿಗಳೇ. ಘಟನೆ ನಡೆದದ್ದು 24ನೇ ತಾರೀಖಿನ 27ನೇ ತಾರೀಖಿನ ಒಂದು ದೂರು ಬಂದಿದೆ. ತಿಮ್ಮಪ್ಪನವರು ಇದರ ಮೇಲೆ ಉದ್ದೇಶ ಪೂರ್ವಕವಾಗಿ ಹಾನಿ ಮಾಡಿದ್ದಾರೆ. ಆದುದರಿಂದ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ಇದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ, ಮುಂದಿನ ಕ್ರಮವನ್ನು ಪೋಲೀಸಿನವರು ಕೈಗೊಂಡಿದ್ದಾರೆ.

ಶ್ರೀ ಎಂ. ರಾಮಪ್ಪ.— ಪರಿಹಾರ ಧನ ಜಾಸ್ತಿ ಕೊಡುವುದಕ್ಕೆ ವ್ಯವಸ್ಥೆ ಮಾಡಿ, ಅಲ್ಲಿರುವವರೆಲ್ಲರೂ ನಿರ್ಗತಿಕರಾಗಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ. — ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಈ ಸಂದರ್ಭದಲ್ಲಿ ಒಂದು ವಿಷಯವನ್ನು ತರುವುದಕ್ಕೆ ಇಚ್ಛಿಸುತ್ತೇನೆ. ಕೂಡಲೇ ಸಹಾಯ ಮಾಡುವುದಕ್ಕೆ ತಹಶೀಲ್ದಾರರವರ ಹತ್ತಿರ ಹಣ ಇರುವುದಿಲ್ಲ. ಜಾಸ್ತಿ ಕೂತ ಕೊಡುವುದಕ್ಕೂ ಬರುವುದಿಲ್ಲ. ಹಳೇ ಕಾಲದ ರೀತಿನಲ್ಲಿಯೇ ಪರಿಹಾರ ಧನ ಕೊಡಲಾಗುತ್ತಿದೆ. ನಾಟಾಗಳು ಮತ್ತು ಮರವಟ್ಟುಗಳನ್ನು ಕೊಡಬೇಕಾದರೂ ಹಳೇ ರೇಟಿನ ಪ್ರಕಾರ ಕೊಡುತ್ತಿದ್ದಾರೆ. ಇದನ್ನು ಸ್ವಲ್ಪ ಪರಿಷ್ಕರಣಮಾಡಿ, ಹೊಸ ರೇಟನ್ನು ಗೊತ್ತು ಮಾಡಿದರೆ ಒಳ್ಳೆಯದು. ಅಲ್ಲದೆ, ಪರಿಹಾರಧನವನ್ನು ತಕ್ಷಣ ಕೊಡುವಂಥ ವ್ಯವಸ್ಥೆಯನ್ನು ಸರ್ಕಾರದವರು ಇಟ್ಟುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಯಾವ ಯಾವ ರೀತಿಯ ಮನೆಗಳು ಸುಟ್ಟು ಹೋಗುತ್ತವೆ ಅದರ ಮೇಲೆ ಪರಿಹಾರ ಕೊಡುವುದಕ್ಕೆ ಬರುತ್ತದೆ. ಗುಡಿಸಲುಗಳು ಸುಟ್ಟಾಗ ಟಿಂಬರ್ ಕೊಡಲಿಕ್ಕೆ ಬರುವುದಿಲ್ಲ, ಕೊಟ್ಟರೂ ಪ್ರಯೋಜನವಾಗುವುದಿಲ್ಲ. ಮಲೆನಾಡಿನಲ್ಲಿ ಕಟ್ಟಿಗೆಗಳನ್ನು ಉಪಯೋಗಿಸಿ ಮನೆ ಕಟ್ಟುತ್ತಾರೆ, ಆದರೂ ಮಾನ್ಯ ಬಂಗಾರಪ್ಪನವರ ಸೂಚನೆಯನ್ನು ಗಮನದಲ್ಲಿಟ್ಟು ಕೊಳ್ಳಲಾಗುವುದು.

ಶ್ರೀ ರಾಮಪ್ಪ.—ನಮ್ಮಲ್ಲಿ ಗುಡಿಸಲುಗಳನ್ನು ಕಟ್ಟಬೇಕಾದರೂ 2000-3000 ರೂಪಾಯಿಗಳು ಖರ್ಚಾಗುತ್ತದೆ.

ಉಪಾಧ್ಯಕ್ಷರು.— ಆಯಾ ಪ್ರದೇಶಕ್ಕೆ ಅನುಗುಣವಾಗಿ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಸಚಿವರು).— ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಓದುವುದಕ್ಕೆ ತಮ್ಮ ಅಪ್ಪಣೆ ಕೇಳುತ್ತೇನೆ.

ಗುಲ್ಬರ್ಗ ಜಿಲ್ಲೆಯ ಯಾದಗಿರಿ ಪುರಸಭೆಯವರು ದಿನಾಂಕ 28-9-1983ರಂದು ಮಾಡಿದ ನಡವಳಿಕೆಯನ್ನು ತಡೆ ಹಿಡಿಯಬೇಕೆಂದು 11 ಜನ ಸದಸ್ಯರು ಮನವಿಯನ್ನು ಸಲ್ಲಿಸಿದ ಮೇಲೆ 7ದಿವಸ ಗಳ ಅಂತರದ ಕಾಲಾವಕಾಶವನ್ನು ನೋಟೀಸ್ ಕೊಡುವುದರಲ್ಲಿ ಪರಿಪಾಲಿಸಿಲ್ಲವೆಂಬ ಮನವಿಯ ಮೇರೆಗೆ ಜಿಲ್ಲಾಧಿಕಾರಿಗಳು ದಿನಾಂಕ 23-9-83ರಂದು ತಂತಿ ಮೂಲಕ ಸಂದೇಶ ಕಳುಹಿಸಿ ಕಡತಗಳ ಪರಿಶೀಲನೆಗೆ ಅನುಗುಣವಾಗಿ ಅಮಾನತ್ತು ಮಾಡಿದ್ದು ನಿಜವಾದ ಸಂಗತಿಯಾಗಿರುತ್ತದೆ. ಜಿಲ್ಲಾಧಿಕಾರಿಗಳು ಕರ್ನಾಟಕ ಪುರಸಭೆಯ ಕಾಯಿದೆ 1964ರ ಕಲಂ 306 ಪ್ರಕಾರ ಸದರಿ ಕ್ರಮವನ್ನು ಕೈಗೊಂಡಿದ್ದಾರೆ.

ಆ ದಿನದ ನಡವಳಿಕೆಯಲ್ಲಿ (1) 1983-84ರ ಮುಂಗಡ ಪತ್ರ ಮಂಡನೆ (2) ಸ್ಥಾಯೀ ಸಮಿತಿಯ ರಚನೆ (3) ನೀರು ಪೂರೈಸುವ ಬಗ್ಗೆ ಇನ್ನೂ ಹಲವಾರು ವಿಷಯಗಳು ಸೇರಿ ಒಟ್ಟು 8 ವಿಷಯಗಳನ್ನು ಚರ್ಚಿಸಿದ್ದು 11 ಮಂದಿ ವಿರೋಧಿ ಸದಸ್ಯರುಗಳ ಸಭಾತ್ಯಾಗ ಮಾಡಿದ ನಂತರ ಉಳಿದ 12 ಮಂದಿ ನಡವಳಿಕೆ ಅನುಮೋದಿಸಿದ್ದು ದಾಗಿ ಜಿಲ್ಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿದ್ದಾಗಿ ವ್ಯಕ್ತವಾಗಿದೆ.

ಜಿಲ್ಲಾಧಿಕಾರಿಗಳು ಕಡತಗಳನ್ನು ತರಿಸಿ ಪುನರ್ ಪರೀಶೀಲನಾನಂತರ ಯಾವುದೇ ಗುರುತರವಾದ ಲೋಪ ಇಲ್ಲದಿರುವುದು ಕಂಡು ಬಂದಿದ್ದರಿಂದ ದಿನಾಂಕ 23-9-83ರ ನಡವಳಿಕೆಯನ್ನು ಅಮಾನತ್ತಿನಲ್ಲಿ ಟ್ಟಿದ್ದ ಆಜ್ಞೆಯನ್ನು ಹಿಂತೆಗೆದುಕೊಂಡಿದ್ದು, ಪುರಸಭೆಯ 23-9-83ರ ನಡವಳಿಕೆಯನ್ನು ಅನುಷ್ಠಾನಕ್ಕೆ ತರುವಂತೆ ಪುರಸಭೆಗೆ ತಿಳಿಸಿರುವುದಾಗಿ ದಿನಾಂಕ 6 2-84ರ ಸಂಜೆ 4-50ರಲ್ಲಿ ಸಂಪರ್ಕಿಸಿದಾಗ ತಿಳಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಒಂದು ಮಾತನ್ನು ಹೇಳುತ್ತೇನೆ. ನಿಮ್ಮ ಮಂತ್ರಿ ಗಳು ಯಾವ ರೀತಿ ವರ್ತನೆ ಮಾಡುತ್ತಿದ್ದಾರೆ ಎನ್ನುವುದಕ್ಕೆ ಇದು ಒಂದೇ ಉದಾಹರಣೆ ಸಾಕು. ಮೂರು ತಿಂಗಳ ಹಿಂದೆ ಯಾದಗಿರಿ ಮುನಿಸಿಪಾಲಿಟಿಯಲ್ಲಿ ಮೆಜಾರಿಟಿಯಿಂದ ಯುನಾನಿಮಸ್ ಆಗಿ ರೆಸಲ್ಯೂಷನ್ ಪಾಸ್ ಮಾಡಿ, ಇಂತಿಂಥ ಕೆಲಸಗಳು ಆಗಬೇಕೆಂಬುದನ್ನು ನಿರ್ಣಯ ಮಾಡಿಕೊಂಡು ಆದ ಮೇಲೆ ಮಾನ್ಯ ಮಂತ್ರಿಗಳು ಹೇಳಿದರು ಎಂದು ಡಿ.ಸಿ.ಯಿಂದ ಅದನ್ನು ಸಸ್ಪೆಂಡ್ ಮಾಡುವುದಕ್ಕೆ ಎಷ್ಟು ಆಸಕ್ತಿ ವಹಿಸಿದ್ದಾರೆ? You are acting with vengeance You do not have any interest in the administration ನಾನು ಇಲ್ಲಿ 334ರ ಮೇಲೆ ಒಂದು ನೋಟೀಸ್ ಕಳುಹಿಸಿದ ಮೇಲೆ, ಟೆಲಿಗ್ರಾಂ ಮೂಲಕ ಸೂಚನೆ ಕೊಟ್ಟು ಅದನ್ನು ಸರಿಪಡಿಸಲಾಗಿದೆ. ಅಲ್ಲಿಯವರೆಗೆ ಆದಂಥಾದಕ್ಕೆ ಯಾರು ಕಾರಣ? ಈ ರೀತಿ ತಮ್ಮ ಮಂತ್ರಿಗಳು ಏಕೆ ರಾಜಕೀಯ ಮಾಡುತ್ತಾರೆ? ಎನ್ನುವುದರ ಬಗ್ಗೆ ತಾವು ಹೇಳುವುದು ಒಂದು ಕಡೆ ಸರಿ ಎಂದು ಹೇಳುತ್ತೀರಿ. ಇನ್ನೊಂದು ಕಡೆ ಫೋನ್ ಮಾಡಿ ಕಡತ ಬಂದಿದೆ ಸಸ್ಪೆಂಡ್ ಮಾಡಿ ಎಂದು ಹೇಳುವುದು ಸರಿಯೇ? ಅಲ್ಲಿ ಬಡವರು ಇದ್ದಾರೆ. ಬಡವರ ಬಗ್ಗೆ ಕೆಲಸ ಮಾಡಬೇಕೆಂಬ ವಿರೋಧ ಪಕ್ಷದ ಮುನಿಸಿಪಾಲಿಟಿಯವರು ಇದ್ದಾರೆ. ಅವರು ಆಡಳಿತ ನಡೆಸುವುದಕ್ಕೆ ನಿಮ್ಮ ಮಂತ್ರಿಗಳು ತೊಂದರೆ ಕೊಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಇದನ್ನು ತಾವೇ ಒಪ್ಪಿಕೊಂಡಿದ್ದೀರಿ. ಇವರಿಗೆ ತಾವು ಸರಿಯಾದ ರೀತಿಯಲ್ಲಿ ಬುದ್ಧಿ ಹೇಳಿ, ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಆಸಕ್ತಿ ಇದ್ದರೆ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಸೋತ ಮೇಲೂ ತೊಂದರೆ ಏಕೆ? ಆವರು ಇವೊತ್ತು ಸದನದಲ್ಲಿ ಕ್ಷಮೆ ಕೇಳಬೇಕು. ಎಲೆಕ್ಟೆಡ್ ಬಾಡಿ ಡೆವಲಪ್‌ಮೆಂಟ್ ಆಫೀಸ್‌ಗೋಸ್ಕರ ಒಂದು ರೆಸಲ್ಯೂಷನ್ ಮಾಡಿದ್ದರೆ, ಅದನ್ನು ಸಸ್ಪೆಂಡ್ ಮಾಡಿಸಿ ಅಬ್‌ಸ್ಟ್ರಕ್ಟ್ ಮಾಡಿದ್ದಾರೆ ಇದರಿಂದ ಬಡವರಿಗೆ ತೊಂದರೆಯಾಗಿದೆ. ಆದುದರಿಂದ ಸಂಬಂಧಪಟ್ಟ ಮಂತ್ರಿಗಳು ಸದನಕ್ಕೆ ಬಂದ ಮೇಲೆ ಇನ್ನೊಂದು ಸಾರಿ ಈ ಸಬ್ಜೆಕ್ಟ್ ತೆಗೆದುಕೊಳ್ಳಬೇಕು.

ಶ್ರೀ ಲಕ್ಷ್ಮೀಸಾಗರ್.— ತಾವು 334ರಲ್ಲಿ ನೋಟೀಸ್ ಏನು ಕೊಟ್ಟಿದ್ದೀರಿ ಅಂದರೆ "The CMC has passed certain resolution in the first meeting But, that resolution was suspended by the DC at the instance of Minister

for Animal Husbandory which is illegal. Notice is well in time. Meeting held correctly, but it was suspended". First Week ಅಂದರೆ ಯಾವುದು? There are seven days in aweek ಇದನ್ನೆಲ್ಲಾ ನೋಡಿ ವೋಟಿಂಗ್ ನಡೆದಿರುವುದು ಸರಿಯಾಗಿದೆ, ಏನೂ ಮಿಸ್ಟೇಕ್ ಇಲ್ಲ, ತಪ್ಪಾಗಿದೆ ಎನ್ನುವುದನ್ನು ತಿದ್ದಿ, ಸರಿಯಾಗಿದೆ ಎಂದು ಹೇಳಿದ ಮೇಲೂ ಮಾನ್ಯ ಸದಸ್ಯರು ಈ ರೀತಿ ಹೇಳಿದರೆ ಏನು ಮಾಡುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಯಾರು ಇನ್‌ಸ್ಪೆಕ್ಷನ್ ಕೊಟ್ಟಿದ್ದಾರೋ, ಅವರೇ ಇಲ್ಲಿ ಹೇಳಲಿ.

ಶ್ರೀ ಕೆ. ಮಲ್ಲಪ್ಪ.— ಮಾನ್ಯ ಸದಸ್ಯರು ಮಾತನಾಡುವಾಗ, ಮಂತ್ರಿಗಳು ವಿನಾ ಕಾರಣ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿದ್ದಾರೆ, ಇದು ನಿಜವಾಗಿಯೂ ಅರ್ಥಗರ್ಭಿತವಾಗಿದೆ. ಜನತೆಯ ಪ್ರೀತಿ ವಿಶ್ವಾಸವನ್ನು ಗೆದ್ದುಕೊಂಡು ಸರ್ಕಾರ ರಚನೆ ಮಾಡಿದಂಥ ಪಕ್ಷ ಜನತಾ ಪಕ್ಷ. ಮಾನ್ಯ ಸದಸ್ಯರು ಯಾವ ರೀತಿ ನಡೆದುಕೊಳ್ಳುತ್ತಿದ್ದಾರೆನ್ನುವುದು ತಾವೇ ಅರ್ಥ ಮಾಡಿಕೊಂಡರೆ ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಮಂತ್ರಿಗಳನ್ನು ಚುನಾವಣೆಗೆ ಕರೆದುಕೊಂಡು ಬನ್ನಿ.

8. Legislative Business

The Karnataka Educational Institution (Prohibition of Capitation Fee) Bill, 1984.....passed.

(Motion to Consider)

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ದುಂಬರತಕ್ಕಂಥ ಮಸೂದೆಯ ವಿಷಯದಲ್ಲಿ ನಾವು ಆಲೋಚನೆ ಮಾಡಬೇಕಾದುದು ಬಹಳ ಅಗತ್ಯ. ಇಲ್ಲಿ ತೀಕ್ಷ್ಣವಾದಂಥ ಆಲೋಚನೆ ಮಾಡಬೇಕಾದುದು ಇದೆ. ಏಕೆಂದರೆ ಇಂಜನಿಯರಿಂಗ್ ಕಾಲೇಜುಗಳಿಗೆ ಮತ್ತು ಮೆಡಿಕಲ್ ಕಾಲೇಜುಗಳಿಗೆ ಮಾತ್ರ ಅಲ್ಲ ಈಗ ಶಿಕ್ಷಣ ವಿಹಾರಗಳಿಗೂ ಸಹ ಕ್ಯಾಪಿಟೇಷನ್ ಫೀಯನ್ನು ವಸೂಲ್ಮಾಡತಕ್ಕ ಪರಿಸ್ಥಿತಿ ಬಂದಿದೆ. ಇಂಥ ಪರಿಸ್ಥಿತಿಯಲ್ಲಿ ನಾವು ಅದನ್ನು ತಪ್ಪಿಸುವುದು ಹೇಗೆ ಎನ್ನುವುದು ನಮ್ಮ ಮುಂದಿರತಕ್ಕ ಪ್ರಶ್ನೆಯಾಗಿದೆ. ಬಹಳ ಜನ ಸದಸ್ಯರು ಇವನ್ನು ತಪ್ಪಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಸ್ವಲ್ಪ ಕಾಲಾವಧಿ ಬೇಕಾಗುತ್ತದೆ. ಇದನ್ನು ತಪ್ಪಿಸಿದರೆ ಕೆಲವು ತೊಂದರೆ ಇದೆಯೆಂದು ಹೇಳಿ, ಸರ್ಕಾರದವರು ಈಗ ನಮ್ಮ ಮುಂದೆ ಮಂಡಿಸಿರತಕ್ಕ ಮಸೂದೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ ನನ್ನ ಅಭಿಪ್ರಾಯವಾದರೂ ಏನೆಂದರೆ, ಈಗ ಮೆಡಿಕಲ್ ಕಾಲೇಜುಗಳಲ್ಲೇ ಆಗಲೀ, ಇಂಜನಿಯರಿಂಗ್ ಕಾಲೇಜುಗಳಲ್ಲೇ ಆಗಲೀ ಸೀಟುಗಳನ್ನು ಹಂಚಿಕೆ ಮಾಡುವಾಗ ಯಾವುದು ಮುಖ್ಯವಾಗಿ ಆಧಾರ? ಕ್ಯಾಪಿಟೇಷನ್ ಫೀ ಒಂದು, ಅದರ ಜೊತೆಗೆ ಅವರಿಗೆ ಇರತಕ್ಕಂಥ ಮೆರಿಟ್. ಇವೆರಡನ್ನೂ ಆಧಾರವಾಗಿ ಇಟ್ಟುಕೊಂಡು ಸೀಟುಗಳನ್ನು ಹಂಚುತ್ತಿರುವುದನ್ನು ನಾವು ನೋಡಬಹುದು. ಕ್ಯಾಪಿಟೇಷನ್ ಫೀಯನ್ನು ವಜಾ ಮಾಡಬೇಕು ಎನ್ನುವುದರ ಉದ್ದೇಶವೇನು? ಮೂಲತಃ ಸೀಟುಗಳ ಹಂಚಿಕೆಯನ್ನು ಮೆರಿಟ್ ಮೇಲೆ ಮಾಡಬೇಕೆನ್ನುವ ಉದ್ದೇಶ ಇಲ್ಲಿ ಇದೆಯೆಂದು ನಾನು ಭಾವಿಸುತ್ತೇನೆ. ಇವೊತ್ತಿನ ದಿವಸ ಮೆರಿಟ್‌ಗೆ ಇರತಕ್ಕಂಥ ಪರಿಸ್ಥಿತಿ ಏನು? ಅಂದರೆ ಕೇವಲ ಅವರ ಜ್ಞಾನ ಸಂಪಾದನೆಯನ್ನು ಪ್ರದರ್ಶನ ಮಾಡತಕ್ಕಂಥ ಪರಿಸ್ಥಿತಿ ಇಲ್ಲಿ ಇಲ್ಲ. ಪ್ರಶ್ನೆ ಪತ್ರಿಕೆಗಳನ್ನು ಕದ್ದು, ಮಾರಾಟ ಮಾಡಿ, ಉತ್ತರವನ್ನು ಮೊದಲೇ ಸಿದ್ಧತೆ ಮಾಡಿಕೊಂಡು ಪರೀಕ್ಷೆಗೆ ಹೋಗುವ ಪರಿಸ್ಥಿತಿ ಇದೆ. ಇಷ್ಟು ಮಾತ್ರ ಅಲ್ಲ, ಪರೀಕ್ಷೆ ಬರೆದಾದ ಮೇಲೂ ಕೂಡ ಯಾರು ಎಕ್ಸಾಮಿನರ್ಸ್ ಎಂದು ಹುಡುಕಿಕೊಂಡು ಅವರ ಸಹಾಯ ಪಡೆದು, ಮೆರಿಟ್ಟನ್ನು ಗಳಿಸತಕ್ಕ ಪರಿಸ್ಥಿತಿ ಇದೆ. ಇದನ್ನೆಲ್ಲಾ ವೈಷ್ಟಿಯಲ್ಲಿಟ್ಟುಕೊಂಡು ಆಲೋಚನೆ ಮಾಡಿದರೆ. ಮೆರಿಟ್ ಎನ್ನುವುದಕ್ಕೆ ಅರ್ಥವಿಲ್ಲದ ಪರಿಸ್ಥಿತಿ ಬಂದಿದೆ. ಮೆರಿಟ್ ಯಾರಿಗೆ ಸಿಗುತ್ತದೆ? ಕ್ಯಾಪಿಟೇಷನ್ ಫೀಸ್ ಕೊಡತಕ್ಕಂಥ ಶಕ್ತಿ ಯಾರಿಗೆ ಇದೆ? ಪಳ್ಳಿಗಾಡಿನಲ್ಲಿರತಕ್ಕ ರೈತರಿಗಾಗಲೀ, ರೈತ ಕೂಲಿಗಾರರಿಗಾಗಲೀ, ಸಾಮಾನ್ಯ ಜನರಿಗಾಗಲೀ ಇವೆರಡಕ್ಕೂ ಶಕ್ತಿ ಇಲ್ಲ. ಕ್ಯಾಪಿಟೇಷನ್ ಫೀ ಕೊಡುವುದಕ್ಕೂ ಶಕ್ತಿ ಇಲ್ಲ. ಮೆರಿಟ್ ಪಡೆಯುವುದಕ್ಕೂ ಶಕ್ತಿ ಇಲ್ಲ. ಇವರಿಗೆ ಮೆರಿಟ್ ಪಡೆಯುವುದಕ್ಕೂ ಅವಕಾಶವೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಸೀಟುಗಳ ಹಂಚಿಕೆ ಅನುಕೂಲಸ್ಥರಿಗೆ ಪಟ್ಟಣಗಳಲ್ಲಿ ಪಾಸ ಮಾಡತಕ್ಕಂಥ ಜನರಿಗೆ ಎಲ್ಲಾ ಸೌಲಭ್ಯಗಳೂ ಇರತಕ್ಕಂಥ ಜನಕ್ಕೆ ಈ ಸೀಟುಗಳು ಸಿಗತಕ್ಕಂಥ ಪರಿಸ್ಥಿತಿ ಇದೆ. ಇದನ್ನೆಲ್ಲಾ ನಾವು ಆಲೋಚನೆ ಮಾಡಬೇಕಾದುದು ಸೂಕ್ತವೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ ಹಳ್ಳಿಗಾಡಿನಲ್ಲಿ ಇರತಕ್ಕಂಥ ಜನಗಳ ಪರಿಸರ ಅವರಿಗೆ ಇರತಕ್ಕಂಥ ಅವಕಾಶ, ಇದನ್ನು ನೋಡಿದಾಗ ಈ ರೀತಿ ಮೆರಿಟ್ ಪಡೆಯುವುದಕ್ಕೆ ಅವಕಾಶವಿಲ್ಲ? ಆದುದರಿಂದ ಈ ಸೀಟುಗಳ ಹಂಚಿಕೆಯಾಗುವಾಗ ಬಹು